## ಮೂಗಿನ ಜ್ಯೂಸು

ರಜೆಗೆ ಮನೆಗೆ ಬಂದಿದ್ದ ನಮ್ಮ ಐದು ವರ್ಷದ ಮೊಮ್ಮಗನ ಜೊತೆಗೆ ಸಂಜೆ ಪಕ್ಕದ ಮನೆಗೆ ಹೋಗಿದ್ದೆ. ಮಾತುಕತೆಯ ನಂತರ ಗೆಳತಿ ನನ್ನ ಮೊಮ್ಮಗನಿಗೆ, 'ನಿಂಬೆಹಣ್ಣಿನ ಶರಬತ್ತು ಕೊಡಲಾ?' ಎಂದು ವಿಚಾರಿಸಿದಾಗ, 'ಬೇಡಾ ಆಂಟೀ... ಈಗ ತಾನೇ ಇಲ್ಲಿಗೆ ಬರುವಾಗ ಅಜ್ಜಿ ಮೂಗಿನ ಜ್ಯೂಸ್ ಮಾಡಿಕೊಟ್ಟರು. ಹೊಟ್ಟೆ ಫುಲ್ ಇದೆ' ಎಂದ. ಇದನ್ನ ಕೇಳಿದ ಅವರ ಮೊಮ್ಮಗ 'ಅಯ್ಯೋ... ಥೂ... ಮೂಗಿನ ಜ್ಯೂಸಾ' ಎಂದು ಮುಖ ಸಿಂಡರಿಸಿದಾಗ, ಇನ್ನು ಅನರ್ಥವಾಗುವುದು ಬೇಡ ಎಂದು ನಾನು ಕೂಡಲೇ, 'ನೋಡು ಮಗಾ, ನಮ್ಮ ಕೊಂಕಣಿಯಲ್ಲಿ 'ಮೂಗು' ಅಂದರೆ ಹೆಸರುಕಾಳು ಅಂತರ್ಥ. ಅದನ್ನು ರುಬ್ಬಿ ಬೆಲ್ಲಾ ಹಾಕಿ ಪಾನಕ ಮಾಡಿದ್ದೆ. ಬೇಸಿಗೆಗೆ ತಂಪಾಗಿರಲಿ ಅಂತಾ. ಅದನ್ನೇ ಇವನು ಮೂಗಿನ ಜ್ಯೂಸು ಅಂದಿದ್ದು' ಎಂದು ವಿವರಿಸಿದಾಗ ಎಲ್ಲರಿಗೂ ನಗುಬಂದಿತು.

**ಜಯಮಾಲಾ ಪೈ**



---



ಕಲೆ: ಗಣೇಶ ಆಚಾರ್ಯ

## ಸಸ್ಯಗಳ ಬೆವರು !

ಸಸ್ಯಗಳ ಬಾಷ್ಪವಿಸರ್ಜನೆಯ ಬಗ್ಗೆ ತರಗತಿಯಲ್ಲಿ ಪಾಠ ಮಾಡಿದ ನಂತರ ಮಕ್ಕಳನ್ನು ಅಂಗಳಕ್ಕೆ ಕರೆತಂದೆ. ಕುಂಡದಲ್ಲಿರುವ ಸಸ್ಯಕ್ಕೆ ಪಾರದರ್ಶಕ ಪ್ಲಾಸ್ಟಿಕ್ ಚೀಲವನ್ನು ಕಟ್ಟಿ ಒಂದೆರಡು ನಿಮಿಷ ಬಿಸಿಲಿನಲ್ಲಿಟ್ಟರೆ ಪ್ಲಾಸ್ಟಿಕ್ ಚೀಲದ ಒಳಭಾಗದಲ್ಲಿ ನೀರಿನ ಹನಿಗಳು ಮೂಡುತ್ತವೆ. ಎಲೆಗಳ ಮೂಲಕ ಆವಿಯಾಗುವ ನೀರೇ ಬಾಷ್ಪೀಕರಣದ ಮೂಲ ಎಂಬುದನ್ನು ಪ್ರಯೋಗದ ಮೂಲಕ ತೋರಿಸುತ್ತಿದ್ದೆ. 'ಈಗ ಪ್ಲಾಸ್ಟಿಕ್ ಕವರಿನ ಒಳಗೆ ನೀರಿನ ಹನಿಗಳು ಯಾಕೆ ಬಂದವು?' ಎಂದು ಮಕ್ಕಳಿಗೆ ಪ್ರಶ್ನಿಸಿದೆ. ತುಸು ಮೌನದ ನಂತರ ಒಬ್ಬ ವಿದ್ಯಾರ್ಥಿ 'ಸಾ ಪ್ಲಾಸ್ಟಿಕ್ಕಿನ ಕವರ್ ಕಟ್ಟಿ ಬಿಸಲಾಗ ಇಟ್ಟಿವಲ್ಲ ಸಾ ಅದಕಾ ಗಿಡಕ್ಕ ಸೆಕಿ ಆಗಿ ಬೆವರು ಬಂದಾತ ಸಾ' ಎಂದು ಉತ್ತರಿಸಿದ.

**ಮಹೇಶ್ವರ ಹುರುಕಡ್ಲಿ**